## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 382 |
| 2 | ಸದಸ್ಯರ ಹೆಸರು | : | ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 15-09-2022 |
| 4 | ಉತ್ತರಿಸುವವರು | : | ಮಾನ್ಯ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತ ಕಟ್ಟಡ ನಿರ್ಮಾಣಕ್ಕೆ ಪಾಲಿಕೆಯ ಅಧಿಕಾರಿಗಳೇ ಪ್ರೋತ್ಸಾಹ ನೀಡುತ್ತಿರುವ ಕುರಿತು ಸರ್ಕಾರದ ನಿಲುವೇನು? | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆದೇಶ ಸಂಖ್ಯೆ ಮು.ಆ/ಪಿ.ಆರ್/43/2022-23 ದಿನಾಂಕ: 21-07-2022 ರಲ್ಲಿ ಪಾಲಿಕೆಯ ವ್ಯಾಪ್ತಿಯಲ್ಲಿ ಅನಧಿಕೃತ ಕಟ್ಟಡ ನಿರ್ಮಾಣಕ್ಕೆ ಕಡಿವಾಣ ಹಾಕುವ ಸಂಬಂಧ ಪಾಲಿಸಬೇಕಾದ ಕ್ರಮಗಳು ಮತ್ತು ವಿವಿಧ ಅಧಿಕಾರಿಗಳಿಗೆ ಜವಾಬ್ದಾರಿ ನಿಗಧಿಪಡಿಸಿ ಆದೇಶ ಹೊರಡಿಸಿದೆ.<br>ಸದರಿ ಆದೇಶದಂತೆ, ಮಂಜೂರಾತಿ ನಕ್ಷೆಗಳ ಉಲ್ಲಂಘನೆ, ಅನಧಿಕೃತ ಕಟ್ಟಡ/ಅನಧಿಕೃತ ಕಟ್ಟಡದ ಭಾಗವನ್ನು ತೆರವುಗೊಳಿಸಲು ಪಾಲಿಸಬೇಕಾದ ಕ್ರಮಗಳು ಆ ಕರ್ತವ್ಯದಲ್ಲಿ ವಿಫಲರಾಗುವ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು/ಸಿಬ್ಬಂದಿಗಳ ವಿರುದ್ಧ ಕೆ.ಎಂ.ಸಿ ಕಾಯ್ದೆ ಕಲಂ 321(ಬಿ)ರ ಅಡಿಯಲ್ಲಿ ಹಾಗೂ ಪ್ರಸ್ತುತ ಬಿಬಿಎಂಪಿ ಕಾಯ್ದೆ-2020ರ ಕಲಂ 252ರ ಅಡಿಯಲ್ಲಿ ಅಗತ್ಯ ದಂಡ ವಿಧಿಸಿ ಅಮಾನತ್ತಿನಲ್ಲಿಟ್ಟು, ಇಲಾಖಾ ವಿಚಾರಣೆ ನಡೆಸಿ ಸೂಕ್ತ ಶಿಸ್ತು ಕ್ರಮ ಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ. |
| ಆ) | ಅನಧಿಕೃತ ಕಟ್ಟಡ ನಿರ್ಮಾಣದ ಕುರಿತು ದೂರು ನೀಡಿದರೆ ದೂರು ನೀಡಿದವರ ವಿರುದ್ಧವೇ ಕ್ರಮ ಕೈಗೊಳ್ಳುವುದಾಗಿ ಬೆದರಿಕೆ ಹಾಕುತ್ತಿರುವ ಪಾಲಿಕೆ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿದೆಯೇ; ಕಳೆದ 3 ವರ್ಷಗಳಲ್ಲಿ ಎಷ್ಟು ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. (ವಿವರ ನೀಡುವುದು) | ಇಂತಹ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ. |
| ಇ) | ಬೆಂಗಳೂರು ನಗರ ಜಿಲ್ಲೆಯ P & T ಲೇಔಟ್, ಅನ್ನದಾನಪುರ, ಟಿಸಿ ಪಾಳ್ಯ, 5ನೇ ಕ್ರಾಸ್, 2ನೇ ಮೈನ್ ಸೈಟ್ ನಂಬರ್ 78ರಲ್ಲಿನ ಅನಧಿಕೃತ ಕಟ್ಟಡ ನಿರ್ಮಾಣದ ಕುರಿತು ದೂರು ನೀಡಿದ್ದರೂ ಕ್ರಮ ಕೈಗೊಳ್ಳದಿರಲು ಕಾರಣವೇನು; ಅನಧಿಕೃತ ನಿರ್ಮಾಣದ ಕುರಿತು ದೂರು ಸ್ವೀಕರಿಸಿದ ದಿನದಂದು ಸದರಿ ಸೈಟ್‌ನಲ್ಲಿ ಯಾವ ಹಂತದ ನಿರ್ಮಾಣ ಕಾರ್ಯ ಪೂರ್ಣಗೊಂಡಿತ್ತು ಯಾವ ಅನಧಿಕೃತ ನಿರ್ಮಾಣದ ಕುರಿತು ದೂರು ಸ್ವೀಕರಿಸಲಾಗಿತ್ತು; (ವಿವರ ನೀಡುವುದು) | ಬೆಂಗಳೂರುನಗರ ಜಿಲ್ಲೆ P & T ಲೇಔಟ್, ಅನ್ನದಾನಪುರ, ಟಿಸಿ ಪಾಳ್ಯ 5ನೇ ಕ್ರಾಸ್, 2ನೇ ಮೈನ್ ಸೈಟ್ ನಂಬರ್ 78ರಲ್ಲಿನ ಕಟ್ಟಡಕ್ಕೆ ಸಂಬಂಧಿಸಿದಂತೆ ದಿನಾಂಕ: 30/03/2022 ರಂದು ದೂರು ಸ್ವೀಕೃತವಾಗಿರುತ್ತದೆ. ಅದರಂತೆ ಬಿಬಿಎಂಪಿ ಕಾಯ್ದೆ ಪ್ರಕಾರ ಕಲಂ 313ರ ಅಡಿಯಲ್ಲಿ ದಿನಾಂಕ: 31/03/2022 ರಂದು ತಿಳುವಳಿಕೆ ಪತ್ರವನ್ನು ಜಾರಿ ಮಾಡಲಾಗಿರುತ್ತದೆ. |

...2.

| | | |
|---|---|---|
| ಈ) | ಬೆಂಗಳೂರು ನಗರ ಜಿಲ್ಲೆಯ P & T ಲೇಔಟ್, ಅನ್ನದಾನ ಪುರ; ಟಿಸಿ ಪಾಳ್ಯ, 5ನೇ ಕ್ರಾಸ್, 2ನೇ ಮೈನ್ ಸೈಟ್ ನಂಬರ್ 78ರಲ್ಲಿನ ಅನಧಿಕೃತ ನಿರ್ಮಾಣದ ಕುರಿತು ಮೊದಲ ದೂರು ಮಾರ್ಚ್-30-2022 ರಂದು ಹಾಗೂ ತದನಂತರ ಹಲವಾರು ದೂರುಗಳು ದಾಖಲಾದರೂ ಸ್ಥಳೀಯ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದೇ ಅನಧಿಕೃತ ಕಾಮಗಾರಿ ಪೂರ್ಣಗೊಳ್ಳಲು ಅವಕಾಶ ನೀಡಿರುವ ಕುರಿತು ಸರ್ಕಾರದ ನಿಲುವೇನು; ಈ ಅನಧಿಕೃತ ಅಕ್ರಮ ಕಾಮಗಾರಿ ಪೂರ್ಣಗೊಳ್ಳಲು ಸಹಕರಿಸಿದ ಅಧಿಕಾರಿಗಳನ್ನು ಯಾವಾಗ ವಜಾಗೊಳಿಸಲಾಗುವುದು? (ವಿವರ ನೀಡುವುದು) | ಬೆಂಗಳೂರು ನಗರ ಜಿಲ್ಲೆಯ P & T ಲೇಔಟ್, ಅನ್ನದಾನ ಪುರ; ಟಿಸಿ ಪಾಳ್ಯ, 5ನೇ ಕ್ರಾಸ್, 2ನೇ ಮೈನ್ ಸೈಟ್ ನಂಬರ್ 78ರಲ್ಲಿನ ಅನಧಿಕೃತ ನಿರ್ಮಾಣದ ದೂರಿಗೆ ಸಂಬಂಧಿಸಿದಂತೆ, ಸದರಿ ಕಟ್ಟಡದ ಮಾಲೀಕರು ಈ ಹಿಂದೆ ಕೆ.ಆರ್.ಪುರ ನಗರಸಭೆಯಲ್ಲಿ 30 ಅಡಿ ಅಗಲ 37 ಅಡಿ 6 ಇಂಚುಗಳ ನಿವೇಶನದಲ್ಲಿ ನೆಲಮಹಡಿಗಾಗಿ ಮಂಜೂರಾತಿ ನಕ್ಷೆಯನ್ನು ದಿನಾಂಕ: 07-12-2006 ರಲ್ಲಿ ಪಡೆದಿರುತ್ತಾರೆ. ಪ್ರಸ್ತುತ ಮೊದಲನೆ ಮಹಡಿಯಲ್ಲಿ 12'8" ಅಗಲ ಹಾಗೂ 29'9" ಉದ್ದದ ಒಂದು ಕೊಠಡಿಯನ್ನು ಅನಧಿಕೃತವಾಗಿ ನಿರ್ಮಿಸುತ್ತಿರುತ್ತಾರೆ. ಆದುದರಿಂದ ಸದರಿ ಕಟ್ಟಡದ ಮಾಲೀಕರಿಗೆ ಬಿ.ಬಿ.ಎಂ.ಪಿ ಕಾಯ್ದೆ 2020ರ ಅಡಿಯಲ್ಲಿ ಕಲಂ 248(1) ಮತ್ತು 248(2) ರಂತೆ ತಿಳುವಳಿಕೆ ಪತ್ರವನ್ನು ಜಾರಿ ಮಾಡಲಾಗಿರುತ್ತದೆ. ಮುಂದುವರೆದು ಸದರಿ ಕಟ್ಟಡದ ಮಾಲೀಕರು ಬಿ.ಬಿ.ಎಂ.ಪಿ ರವರ ವಿರುದ್ಧ ಮಾನ್ಯ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಓ.ಎಸ್. ಸಂಖ್ಯೆ: 2695/2022 ದಿನಾಂಕ: 21/04/2022 ರಲ್ಲಿ ದಾವೆ ಹೂಡಿರುತ್ತಾರೆ.<br><br>ಈ ಹಿನ್ನೆಲೆಯಲ್ಲಿ ಘನ ನ್ಯಾಯಾಲಯದ ಆದೇಶಕ್ಕೆ ಒಳಪಟ್ಟು ಮುಂದಿನ ಕ್ರಮವನ್ನು ಕೈಗೊಳ್ಳಲಾಗುವುದು. |

**ನಅಇ 415 ಎಂಎನ್‌ಯು 2022**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ